

ಅನ್ವಯಿಸದು. ಹೆಲ್ಮೆಟ್ ಅಥವಾ ಶಿರಸ್ತ್ರಾಣ ತಲೆ ರಕ್ಷಿಸಿಕೊಳ್ಳಲು ಸಿದ್ಧಗೊಂಡ ಒಂದು ಸಾಧನ. ಆದರೆ ತಮ್ಮ ತಲೆಯನ್ನು ತಾವೇ ಕಾಯ್ದುಕೊಳ್ಳಲು ಚೌಕಾಸಿ ಮಾಡುವವರ ಸಂಖ್ಯೆಯೇ ಹೆಚ್ಚು. ಇದರಿಂದಾಗಿ ಗುಣಮಟ್ಟ ಮತ್ತು ಮಾನ್ಯತೆ ಇಲ್ಲದ ಹೆಲ್ಮೆಟ್‌ಗಳನ್ನು ಧರಿಸುವವರ ಸಂಖ್ಯೆ ದೊಡ್ಡದಿದೆ.

ಹೆಲ್ಮೆಟ್ ಎಂಬ ಜೀವರಕ್ಷಕ ಧರಿಸಿಯೂ ಆಸ್ಟ್ರೇಲಿಯಾದ ಯುವ ಕ್ರಿಕೆಟಿಗ ಫಿಲಿಪ್ ಹ್ಯೂಸ್ ಮೃತಪಟ್ಟಾಗ ಅವುಗಳ ಗುಣಮಟ್ಟದ ಬಗ್ಗೆ ಚರ್ಚೆ ನಡೆದಿತ್ತು. ಹ್ಯೂಸ್ ಹೆಲ್ಮೆಟ್ ಧರಿಸಿದ್ದರು. ಆದರೂ ಬಲವಾಗಿ ಬಡಿದ ಚೆಂಡು ಅವರ ತಲೆಗೆ ಗಂಭೀರ ಸ್ವರೂಪದ ಹಾನಿ ಮಾಡಿತ್ತು. ಇಷ್ಟು ಮಾತ್ರವಲ್ಲ, ಬಹಳಷ್ಟು ರಸ್ತೆ ಅಪಘಾತಗಳಲ್ಲಿ ತಲೆಗಷ್ಟೇ ಪೆಟ್ಟು ಬಿದ್ದು ಮೆದುಳು ಸಾವಿನಿಂದ ಸಾವಿಗೀಡಾಗುತ್ತಿರುವವರ ಸಂಖ್ಯೆ ದೊಡ್ಡದಿದೆ. ಈ ಎಲ್ಲಾ ಸಂದರ್ಭಗಳಲ್ಲಿ ಎಂಥ ಹೆಲ್ಮೆಟ್ ಧರಿಸಬೇಕು ಎಂಬ ಚರ್ಚೆಗಳು ನಡೆಯುವುದು ಸಾಮಾನ್ಯ.

ಇಂದು ಮಾರುಕಟ್ಟೆಯಲ್ಲಿ ತರಹೇವಾರಿ ಹೆಲ್ಮೆಟ್‌ಗಳು ಲಭ್ಯ. ಬಣ್ಣ, ವಿನ್ಯಾಸ, ಗಾತ್ರ, ಆರಾಮ ನೀಡುವ ವಿವಿಧ ಕಂಪೆನಿಗಳ ಹೆಲ್ಮೆಟ್‌ಗಳು ಲಭ್ಯ ಇವೆ.

### ಹೆಲ್ಮೆಟ್ ಏಕೆ ತೊಡಬೇಕು?

- ದ್ವಿಚಕ್ರ ವಾಹನ ಸವಾರಿ ಸಂದರ್ಭದಲ್ಲಿ ಅಪಘಾತದಲ್ಲಿ ಸಂಭವಿಸಿದರೆ ತಲೆಗೆ ಆಗುವ ಪೆಟ್ಟುತಪ್ಪಿಸಿಕೊಳ್ಳಲು.
- ಹೆಲ್ಮೆಟ್ ಧರಿಸಿದರೆ ಗಾಯಗೊಳ್ಳುವ ಅಥವಾ ಸಾವನ್ನು ತಪ್ಪಿಸಬಹುದಾದ ಸಾಧ್ಯತೆಯ ಪ್ರಮಾಣ ಶೇ 30ರಷ್ಟು ಹೆಚ್ಚು.
- ದ್ವಿಚಕ್ರವಾಹನ ಸವಾರ ಒಂದೊಮ್ಮೆ ಹೆಲ್ಮೆಟ್ ಧರಿಸದಿದ್ದರೆ ಮತ್ತು ಅಪಘಾತ ಸಂಭವಿಸಿದರೆ ಸಾಯುವ ಸಾಧ್ಯತೆ ಶೇ 40ರಷ್ಟು ಹೆಚ್ಚು.
- ಕಾರು ಹಾಗೂ ಇತರ ವಾಹನಗಳಿಗೆ ಹೋಲಿಸಿದಲ್ಲಿ ಅಪಘಾತ ಸಂಭವಿಸಿದಾಗ



## ಹೆಲ್ಮೆಟ್ ಇಲ್ಲದಿದ್ದರೆ ದೊಡ್ಡ ಅನಾಹುತವೇ ಆಗುತ್ತಿತ್ತು

ಎಂಜಿನಿಯರ್ ಓದುವಾಗ ತಂದೆಯ ಸ್ಕೂಟರ್ ತೆಗೆದುಕೊಂಡು ಕಾಲೇಜಿಗೆ ಹೋಗುತ್ತಿದ್ದೆ. ಹೆಲ್ಮೆಟ್ ಹಾಕಿರಲಿಲ್ಲ. ಮುಂದೆ ಹೋಗುತ್ತಿದ್ದ ಟೆಂಪೊ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿದ ಪರಿಣಾಮ ಸ್ಕೂಟರ್ ಡಿಕ್ಕಿ ಹೊಡೆಯಿತು. ನಾನು ಹಾರಿ ನೆಲಕ್ಕೆ ಬಿದ್ದೆ. ನನ್ನ ಮುಖ ನೆಲಕ್ಕೆ ಉಜ್ಜಿಕೊಂಡು ಹೋಯಿತು. ಅಂದು ಸಂಭವಿಸಬಹುದಾಗಿದ್ದ ದೊಡ್ಡ ಅನಾಹುತ ತಪ್ಪಿತು.

ದ್ವಿಚಕ್ರ ವಾಹನ ಚಾಲನೆ ಸಂದರ್ಭದಲ್ಲಿ ಹೆಲ್ಮೆಟ್ ಕಡ್ಡಾಯವಾಗಿ ತೊಡಲು ಅಂದೇ ನಿರ್ಧರಿಸಿದೆ. ಬೈಕ್ ಸವಾರಿಯನ್ನು ಹವ್ಯಾಸ ಮಾಡಿಕೊಂಡ ನಂತರ ಹೆಲ್ಮೆಟ್ ಮತ್ತು ಬೈಕ್ ಗೇರ್ಸ್ ಎಂಬ ವಿವಿಧ ಉಡುಗೆ ಮತ್ತು ತೊಡುಗೆಗಳನ್ನು ತಪ್ಪದೇ ಧರಿಸುತ್ತಿರುವೆ.

ಕೆಲವು ವರ್ಷಗಳ ಹಿಂದೆ ಕೆಟಿಎಂ ಬೈಕ್‌ನಲ್ಲಿ ಆಫ್ರಿಕಾ ಪ್ರವಾಸ ಕೈಗೊಂಡಿದ್ದೆ. ಕೀನ್ಯಾ ಬಳಿಯ ಒಬ್ಬ ಪರಿಣಿತ ಮೆಕ್ಯಾನಿಕ್ ಬಳಿ ನಾನು ಬೈಕ್ ಸರ್ವೀಸ್ ಮಾಡಿಸಿದೆ. ಸರ್ವೀಸ್ ನಂತರ ಟೆಸ್ಟ್ ರೈಡ್‌ಗೆ ಹೋಗಲು ಅವರು ಸಿದ್ಧಗೊಂಡರು. ಹೆಲ್ಮೆಟ್ ಮತ್ತು ಗೇರ್‌ಗಳನ್ನು ತೊಟ್ಟರು. ನನಗೆ ಆಶ್ಚರ್ಯವಾಯಿತು. ನಮ್ಮಲ್ಲಿ ಇವುಗಳನ್ನು ತೊಡದೇ ಹಲವು ಕಿಲೋಮೀಟರ್ ಓಡಿಸುವವರು ಇರುವಾಗ, ಇವರು ಸ್ವಲ್ಪ ವಿಚಿತ್ರ ಎನಿಸಿತು. ‘ಕೇವಲ 250 ಮೀಟರ್ ರೈಡ್‌ಗೆ ಇದೆಲ್ಲ ಬೇಕೆ?’ ಎಂದು ಅವರನ್ನು ಕೇಳಿದೆ. ಅದಕ್ಕವರು, ‘ಈ 250 ಮೀಟರ್‌ನಲ್ಲಿ ಏನೂ ಆಗುವುದಿಲ್ಲ ಎಂದು ಯಾರಾದರೂ ಬರೆದುಕೊಟ್ಟಿದ್ದಾರಾ?’ ಎಂದು ಮರುಪ್ರಶ್ನೆ ಹಾಕಿದರು. ಅವರ ಮಾತು ಮರೆಯಬಾರದ ಪಾಠದಂತೆ ಸದಾ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಿದೆ.

ಮಾರುಕಟ್ಟೆಯಲ್ಲಿ ಆರೈ ಹಾಗೂ ಜಪಾನಿನ ಶೋಯಿ ಕಂಪನಿಯ ಹೆಲ್ಮೆಟ್‌ಗಳು 50 ಸಾವಿರದಿಂದ 60 ಸಾವಿರಕ್ಕೆ ಲಭ್ಯ ಇವೆ. ಅವುಗಳ ಗುಣಮಟ್ಟವೇ ಹಾಗಿರುತ್ತದೆ. ಆದರೆ ಕನಿಷ್ಠ 3ರಿಂದ 5ಸಾವಿರದ ಹೆಲ್ಮೆಟ್ ಖರೀದಿಸುವುದು ಉತ್ತಮ.

**–ಸಂದೇಶ ಶಿವರಾಜು**

ಐಟಿ ಉದ್ಯೋಗಿ